ಕಾಲಕ್ಕೆ ಲೇಡೀಸ್ ಕ್ಲಬ್ಬಿಗೆ ಪಟ್ಟಾಂಗ ಬಾರಿಸಲು ಹೋಗುತ್ತಿದ್ದ ಶಾಂತಮ್ಮ, ಆಫೀಸಿನಿಂದ ಬಂದ ಬಳಿಕ ಅಡುಗೆಮನೆಯಲ್ಲೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದ ಅವರ ಪತಿ ರಂಗನಾಥ ರಾಯರು, ನಾಲ್ಕು ಮಕ್ಕಳ ಕುಟುಂಬವಿತ್ತು. ಮೇಲ್ಮಹಡಿಯಲ್ಲಿ ಪಕ್ಕದ ರಸ್ತೆಯಲ್ಲಿ ಕಿರಾಣಿ ಅಂಗಡಿ ಇಟ್ಟುಕೊಂಡು ಆಗಾಗ ನಾಟಕದಲ್ಲಿ ಅಭಿನಯಿಸುವ ಕಟ್ಟು ಮಸ್ತಾದ ಆಳು, ಹವ್ಯಾಸಿ ರಂಗ ಕಲಾವಿದರಾದ ಧನಂಜಯ ರಾವ್ ಅವರ ವಾಸ. ತಮ್ಮ ಭರ್ಜರಿ ಮೀಸೆ ತಿರುವಿಕೊಂಡು, “ಭಲಾ ಭಲಾ ಬಲ ಭುಜಕೆ ಸಾಟಿ ಯಾರ‍್ರೈ? ದುರುಳ ಕೌರವನ ಸಮರದಿ ಮೆಟ್ಟಿ ಕುಟ್ಟಿ ಕುಟ್ಟಿ ಪುಡಿಗಟ್ಟಿ ನೀಚನ, ಭಲಾ ಭಲಾ ಬಲ ಭುಜಕೆ ಸಾಟಿ ಯಾರ‍್ರೈ” ಎಂದು ಭೀಮಾವೇಶದಲ್ಲಿ ಗದೆ ಕುಟ್ಟುವುದು, ರಾವಣನಂತೆ ಗಹಗಹಸಿ ನಗುವುದು ಮಾಡುತ್ತಾ ನಾಟಕದ ತಾಲೀಮು ನಡೆಸುತ್ತಿದ್ದರು. ಸದಾ ಸ್ವಚ್ಛತಾ ಅಭಿಯಾನದಲ್ಲಿ ಮುಳುಗಿರುವ ಅವರ ಪತ್ನಿ ಗಿರಿಜಮ್ಮ ಕನ್ನಡಿಯ ಬದಲು ತಮ್ಮನೆಯ ರೆಡ್ ಆಕ್ಸೈಡ್ ನೆಲದಲ್ಲೆ ಮುಖ ನೋಡಿಕೊಳ್ಳುತ್ತಿದ್ದರೇನೋ ಅನಿಸುತಿತ್ತು! ಅವರದೇ ಅಭಿನಯ ತಂಡ ಕಟ್ಟಿಕೊಂಡು, ಸಭೆ ಸಮಾರಂಭದಲ್ಲಿ ಜರಗುತ್ತಿದ್ದ ನಾಟಕದಲ್ಲಿ ಒಮ್ಮೊಮ್ಮೆ ಭೀಮಸೇನನಾಗಿ ಮಗದೊಮ್ಮೆ ಕಂಸ, ರಾವಣ, ಹಿರಣ್ಯಕಶಿಪು ಪಾತ್ರಗಳಲ್ಲಿ ಮಿಂಚುತ್ತಿದ್ದರು. ಅವರ ಮನೆಗೆ ಬರುತ್ತಿದ್ದ ಡಾನ್ಸ್ ಮಾಸ್ಟರ್ ಮಾಧವಣ್ಣ ಓಣಿಯ ಹುಡುಗರನ್ನೆಲ್ಲ ಕಲೆಹಾಕಿ ಕಾರ್ಯಕ್ರಮ ಏರ್ಪಡಿಸುತ್ತಿದ್ದರೆ, ನಮ್ಮಂತಹ ಓಣಿಯ ಚಿಳ್ಳೆ ಪಿಳ್ಳೆಗಳ ನೃತ್ಯಾಭ್ಯಾಸಕ್ಕೆ ಧನಂಜಯರಾಯರ ವಿಶಾಲ ಪಡಸಾಲೆಯೋ ವೇದಿಕೆಯಾಗುತ್ತಿತ್ತು!

ಉದ್ದನೆಯ ಅಂಗಳದ ಪಟ್ಟಿ ದಾಟಿ ಮುಂದೆ ಸಾಗಿದರೆ ಜೀರ್ಣಾವಸ್ಥೆಯಲ್ಲಿ ಕಿರುಗುಟ್ಟುವ ಮಾಸಿದ ನೀಲಿ ಬಣ್ಣದ ವಠಾರದ ಹೆಬ್ಬಾಗಿಲು. ಅಲ್ಲಿ ಎದುರಾಗುವ ಮೆಟ್ಟಿಲು ರೈಲ್ವೆ ಬೋಗಿಯಂತಿದ್ದ ನಮ್ಮ ಹೆಂಚಿನ ಮೇಲ್ಮಹಡಿ ಮನೆಗೆ ಕರೆದೊಯ್ಯುತ್ತಿತ್ತು.

ಅಮ್ಮ, ನಾವು ಮೂರು ಹೆಣ್ಣುಮಕ್ಕಳು, ಆಡಿಟ್ ಕೆಲಸವೆಂದು ತಿಂಗಳಲ್ಲಿ ಇಪ್ಪತ್ತು ದಿನಗಳು ಟೂರಿನಲ್ಲೇ ಇರುವ ಅಪ್ಪ, ಇವಿಷ್ಟು ನಮ್ಮ ಸಂಸಾರವೆಂಬ ಆನಂದ ಸಾಗರ! ನೆಲಮಹಡಿಯಲ್ಲಿ ಎದುರು ಬದುರಾಗಿ ಕಟ್ಟಿದ ನಾಲ್ಕೈದು ಚದರದ ಪುಟ್ಟ ಮನೆಗಳಿರುವ ವಠಾರ ಲೋಕ. ಅಲ್ಲಿದ್ದ ನಾಲ್ಕು ಮನೆಗಳಲ್ಲಿ ಮೊದಲಿಗೆ ಆಗರ್ಭ ಶ್ರೀಮಂತ ಮನೆ ಮಾಲೀಕರ (ದೂರದ) ಪರಿಚಯವೆಂದು ತೀರ ಅಗ್ಗದ ಬಾಡಿಗೆಗಿರುವ ಪಾರ್ವತಮ್ಮನವರ ಕುಟುಂಬ. ನನಗೀಗಲೂ ನೆನಪಿರುವುದು ಅವರ ಕಿರಿ ಮಗ ಶಂಕರ ಇಟ್ಟಿದ್ದ (ಆಡಿಯೊ) ಕ್ಯಾಸೆಟ್ ಲೈಬ್ರರಿ. ಆಗಿನ ಕಾಲಕ್ಕೆ ಜನಪ್ರಿಯವಾಗಿದ್ದ ಚಿತ್ರಗೀತೆಗಳ ಕ್ಯಾಸೆಟ್‌ಗಳನ್ನು ಅವನಿಂದ ಬಿಟ್ಟಿಯಾಗಿ ಪಡೆದು, ‘ಬಣ್ಣ ನನ್ನ ಒಲವಿನ ಬಣ್ಣ’, ‘ನಮ್ಮೂರ ಮಂದಾರ ಹೂವೆ’, ‘ತೆರೆ ಬಿನಾ ಜಿಂದಗಿ ಸೆ ಕೋಯಿ’, ‘ಹಂ ತುಮ್ ಇಕ್ ಕಮರೇ ಮೆ ಬಂದ್ ಹೋ’ ಹಾಡುಗಳನ್ನು ಮನದಣಿಯ ಆಲಿಸುತ್ತ ಬದುಕಿನಲ್ಲಿ ಉಲ್ಲಾಸದ ಬಣ್ಣ ತುಂಬಿಕೊಳ್ಳುತ್ತಿದ್ದೆವು!

ಕ್ಯಾಸೆಟ್ ಲೈಬ್ರರಿ ಎದುರಿಗೆ ರಸ್ತೆ ಮೂಲೆಯಲ್ಲಿದ್ದ ತನ್ನ ಗೂಡಂಗಡಿಯಲ್ಲಿ ಡಿಸ್ಕೌಂಟ್ ರೇಟಿನಲ್ಲಿ ತರಕಾರಿ ಕೊಡುತ್ತಿದ್ದ ಮಂಜಣ್ಣ, ಮಡದಿ ಚಂದ್ರಿ ಮತ್ತು ಸದಾ ಚಿಲಿಪಿಲಿ ಗದ್ದಲ ಮಾಡಿಕೊಂಡಿದ್ದ ಎರಡು ಪುಟ್ಟ ಹೆಣ್ಣುಮಕ್ಕಳು ವಾಸವಿದ್ದರು. ಅವರ ಪಕ್ಕ ಶಾಲಾ ಮೇಷ್ಟ್ರಾದ ಪಳನಿ ಸ್ವಾಮಿಯವರ ಕೂಡು ಕುಟುಂಬ. ನಾವು ಅಕ್ಕತಂಗಿಯರ ಗಲಾಟೆಗೆ ತಲೆ ಕೆಟ್ಟ ಅಮ್ಮ, ಗೋಧೂಳಿ ಸಮಯಕ್ಕೆ ಸರಿಯಾಗಿ ಪಳನಿ ಮೇಷ್ಟ್ರ ಮನೆಪಾಠಕ್ಕೆ ನನ್ನನ್ನು ಸಾಗು ಹಾಕಿದಾಗ ಒಂದು ಡಜನು ಹುಡುಗರಿಗೆ ಅವರು ಹೇಳಿಕೊಡುತ್ತಿದ್ದ ವ್ಯಾಕರಣ, ಭೂಗೋಳ, ಬೀಜಗಣಿತ ನನ್ನ ತಲೆಯಲ್ಲಿ ಗೊಬ್ಬರವಾಗಿ ಹಸಿವು ಬಾಯಾರಿಕೆ ನಿದ್ರೆ ಏಕಕಾಲಕ್ಕೆ ವಕ್ಕರಿಸಿ ಕಳ್ಳಹೆಜ್ಜೆ ಹಾಕುತ್ತ ಹಿಂಬಾಗಿಲಿನಿಂದ ಮನೆಗೋಡಿ ಬಿಡುತ್ತಿದ್ದೆ.

ಅವರ ಮನೆಯ ಎಡ ಭಾಗಕ್ಕೆ ನಮ್ಮ ಕಥಾ(ಖಳ)ನಾಯಕಿಯ ವಾಸ. ಅವಳ ನಿಜ ನಾಮಧೇಯ